 ISSN : 2583-2948

# ಕನ್ನಡ ಶಾಸನಗಳ ವೈವಿಧ್ಯಮಯ ಜಗತ್ತು

ಡಾ.ಗೋವಿಂದರಾಜು ಎನ್, ಗೊಲ್ಲಹಳ್ಳಿ
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹೆಬ್ಬೂರು-೫೭೨೧೨೦, ತುಮಕೂರು ಜಿಲ್ಲೆ,
ಮೊ.ನಂ: ೭೭೬೦೩೯೨೦೭೮/೭೮೯೨೪೫೪೫೭೭

ಕನ್ನಡನಾಡು ಕಲೆ, ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ಸಾಮರಸ್ಯ, ಧರ್ಮಾತೀತ ಬದುಕು, ಸಹಕಾರದ ಮುನ್ನೆಲೆ, ಸಹಬಾಳ್ವೆಯ ಜೀವನಾಡಿ, ಸಹೋದರತ್ವದ ತವರುಗಳಿಗೆ ತಾಯ್ತನದ ನೆಲೆವೀಡು. ಇಂತಹ ನಾಡಿನಲ್ಲಿ ಸಾಹಿತ್ಯ ರಚನೆಗೂ ಮೊದಲು ನಾವು ಕಾಣುವುದು ಶಿಲೆಗಳಲ್ಲಿ ಅರಳಿದ ಶಾಸನಗಳ ವೈವಿಧ್ಯಮಯ ಜಗತ್ತು. ಈ ಜಗತ್ತಿನಲ್ಲಿ ನಮ್ಮ ಭಾಷೆಯ ಚರಿತ್ರೆಯ ಕುರುಗಳಿವೆ, ಸಮೃದ್ಧ ಬದುಕಿನ ಸಾಂಸ್ಕೃತಿಕ ವೈಭವವಿದೆ. ಧಾರ್ಮಿಕ ಸಾಮರಸ್ಯ ಮೂಡಿಸುವ ಲಿಖಿತ ದಾಖಲೆಗಳಿವೆ. ಸ್ತ್ರೀಯನ್ನು ದೈವ ಸ್ವರೂಪಿಯಾಗಿ ಪರಿಗಣಿಸಿದ ತಾಯಿಕರುಳಿನ ಸಂಬಂಧಗಳಿವೆ. ಪಂಪನಾಡಿದ 'ಮನುಷ್ಯ ಜಾತಿ ತಾನೊಂದೆ ವಲಂ'ಗೆ ಅಭಿನ್ನವಾಗಿ ನಿಲ್ಲುವ ಮಾನವೀಯ ಕಳಕಳಿಯ ದೃಶ್ಯಗಳಿವೆ. ಮಾರ್ಗಕಾರ ಒತ್ತಿ ಹೇಳಿದ 'ಕಸವರಮೆಂಬುದು ನೆರೆ ಸೈರಿಸಲಾರ್ಪಡೆ ಪರವಿಚಾರಮುಮಂ' ಎಂದರೆ ಪರಮತ ಸಹಿಷ್ಣತೆಯನ್ನು ಜತನದಿಂದ ಕಾಯ್ದುಕೊಂಡು ಬಂದ ಕನ್ನಡಿಗರ ಹೃದಯ ವೈಶಾಲ್ಯತೆಯ ವೀರ ಪರಂಪರೆಯು ಈ ಶಿಲೆಗಳಲ್ಲಿ ಅರಳಿದೆ. ಬಸವಣ್ಣ ಸಾರಿದ 'ದಯವೇ ಧರ್ಮದ ಮೂಲ'ವನ್ನು ಎತ್ತಿ ಹಿಡಿಯುವ ಕಲೆಗಾರಿಕೆ ಇಂದಿನ ಕನ್ನಡಿಗರಿಗಿಂತ ಪ್ರಾಚೀನ ಕನ್ನಡಿಗರ ಗುಣಗಾನ ಮಾಡುವ ಶಾಸನಗಳು ನಾಡಿನಾದ್ಯಂತ ಹರಡಿಕೊಂಡಿವೆ. ಇಂತಹ ಸಮೃದ್ಧ ಪರಂಪರೆಯ ಶಾಸನಗಳ ಸಂಗಮದಲ್ಲಿ ಕನ್ನಡ ಶಾಸನಗಳ ಸಮಗ್ರ ಅಧ್ಯಯನ ಅಸಾಧ್ಯ. ಹಾಗಾಗಿ ಲೇಖನದ ಅರಿವಿರುವ ಕಾರಣ ನನ್ನ ಅದ್ಯತೆಯಂತೆ ಪ್ರಮುಖ ಶಾಸನಗಳ ಒಳನೋಟವನ್ನು ನಾನಿಲ್ಲಿ ಕಂಡರಿಸಿದ್ದೇನೆ. ಜೊತೆಗೆ ಶಾಸನ ಪದದ ಕಿರುಪರಿಚಯ ಮತ್ತು ಅವುಗಳ ವಿಧಗಳ ಬಗ್ಗೆಗೂ ಸಂಕ್ಷಿಪ್ತದ ಓರೆ ನೋಟವಿದೆ.

ಬರಹಗಳನ್ನು ಬಿಟ್ಟು, ಬಹುಕಾಲ ಉಳಿಯುವಂತಹ ಶಿಲೆ, ಲೋಹಗಳು ಮೊದಲಾದವುಗಳ ಮೇಲಿನ ಬರಹಗಳನ್ನು ಶಾಸನಗಳೆಂದು ಕರೆಯುವುದು ಸಾಮಾನ್ಯ ಹೇಳಿಕೆ. "ಸಾಮಾನ್ಯವಾಗಿ ನಾಶವಾಗುವಂತಹ ತಾಳೆಗರಿ, ಭೂರ್ಜಪತ್ರ, ಕಾಗದ ಮೊದಲಾದವುಗಳ ಮೇಲಿನ ಬರಹಗಳನ್ನು ಶಾಸನಗಳೆಂದು ಕರೆಯುವರು"೧ ಎಂಬ ಉಲ್ಲೇಖವಿದೆ. ಶಾಸನಗಳು ಹೆಚ್ಚು-ಕಡಿಮೆ ಸಾರ್ವಜನಿಕ ಸ್ವರೂಪದ ದಿನಾಂಕವನ್ನೊಳಗೊಂಡ, ಒಳಗೊಳ್ಳದ ಸರಳವಾದ ಅಥವಾ ಸಂಕೀರ್ಣವಾದ ವಿಷಯವನ್ನು ಹೇಳುವ ಅಧಿಕಾರಿಕ (official) ಪ್ರಕರಣಗಳಾಗಿವೆ. ಇವುಗಳಲ್ಲಿನ ವಿಷಯ ಶಾಶ್ವತ ದಾಖಲೆಗಳಾಗಬೇಕೆಂಬ ಉದ್ದೇಶದಿಂದ ಕಲ್ಲು, ಲೋಹಗಳಂತಹ ಸಾಮಗ್ರಿಗಳ ಮೇಲೆ ಕೊರೆಯಲ್ಪಟ್ಟವು ಎಂದು ಸಿ.ಹಯವದನ ರಾವ್ ಹೇಳುತ್ತಾರೆ.

ಶಾಸನ ಎಂಬ ಪದ 'ಶಾಸ್' ಎಂಬ ಮೂಲ ಧಾತುವಿನಿಂದ ಬಂದಿದೆ. ಈ ಶಬ್ದದ ಮೂಲ ಅರ್ಥ 'ಆಜ್ಞೆ' ಎಂದರ್ಥ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜರ ಆಜ್ಞೆಯನ್ನು ತಿಳಿಸತಕ್ಕ ಬರವಣಿಗೆ ಶಾಸನ ಎಂದು ಹೇಳಲಾಗಿದೆ. ಶಾಸನ ಕೇವಲ ರಾಜಾಜ್ಞೆಯನ್ನು ಹೊತ್ತ ಬರವಣಿಗೆ ಮಾತ್ರವಾಗಿರದೆ, ಶ್ರೀಸಾಮಾನ್ಯರಿಗೆ ಸೂಚನೆಗಳನ್ನು, ಆಶಯಗಳನ್ನು ಹೊತ್ತ ಶಾಸನಗಳೆಂದು ಕರೆಸಿಕೊಂಡಿವೆ. ಅಂದರೆ, ಅದರ ವಿಷಯ ರಾಜರದಾಗಿರಲಿ, ವೀರರ ವಿಷಯವಾಗಿರಲಿ, ಮಹಾಸತಿಯರ ವಿಷಯವಾಗಿರಲಿ, ಮುನಿಗಳ ವಿಷಯವಾಗಿರಲಿ, ಆತ್ಮಬಲಿಯ ವಿಷಯವಾಗಿರಲಿ ಇವೆಲ್ಲವೂ ಸೇರಿ ಶಾಸನವೆನಿಸುತ್ತವೆ. ಹೀಗೆ ಪರ್ಯಾಯವಾಗಿ ಇತರ ಬರಹಗಳಿಗೆ ಶಾಸನ ಎಂಬ ಹೆಸರು ಬಂತು.

ಈ ಅರ್ಥ ಇನ್ನೂ ವಿಸ್ತಾರವಾಗಿ ರಾಜರ ಪ್ರಶಸ್ತಿ, ವೀರರ ಸಾವನ್ನು, ಸನ್ಯಾಸಿಯ ಮರಣವನ್ನು ಜೊತೆಗೆ ಶಿಲ್ಪದ ಅಥವಾ ಶಿಲ್ಪಿಯ ಹೆಸರನ್ನು ಹೇಳುವ ಬರಹಗಳಿಗೂ ಶಾಸನವೆಂಬ ಹೆಸರು ಬಂತು.

ಶಾಸನಗಳನ್ನು ಕಲ್ಲು ಮತ್ತು ಲೋಹಗಳ ಮೇಲೆ ಬರೆಯುವುದು ಸಾಮಾನ್ಯವಾಗಿದ್ದರೂ ಜಗತ್ತಿನ ಬೇರೆಬೇರೆ ಭಾಗಗಳಲ್ಲಿ ನಿದರ್ಶನಕ್ಕೆ ಮೆಸಪಟೋಮಿಯಾದಲ್ಲಿ ಮೂಳೆಗಳಲ್ಲಿ, ಚೀನಾದಲ್ಲಿ ಸುಟ್ಟ ಇಟ್ಟಿಗೆಗಳ ಮೇಲೆ ಬರೆದ ಶಾಸನಗಳು ಉಪಲಬ್ಧವಾಗಿವೆ. ವಿಶೇಷವಾಗಿ ಕರ್ನಾಟಕದಲ್ಲಿ ಕಲ್ಲಿನ ಮೇಲೆ, ಕಲ್ಲಿನ ಸ್ತಂಭಗಳ ಮೇಲೆ, ದೇವಾಲಯಗಳ ಗೋಡೆಗಳ ಮೇಲೆ, ವಿಗ್ರಹದ ಪೀಠಗಳ ಮೇಲೆ, ತಾಮ್ರಪಟಗಳ ಮೇಲೆ, ಪಾತ್ರೆಗಳ ಮೇಲೆ ಶಾಸನಗಳು ದೊರಕಿವೆ.

ಇತಿಹಾಸ ರಚನೆಗೆ ಅಮೂಲ್ಯವಾದ ವಿಷಯ ಮತ್ತು ವಸ್ತುಗಳು ಶಾಸನಗಳಿಂದ ಲಭ್ಯವಾಗುತ್ತವೆ. ಇವು ರಾಜವಂಶ, ವಂಶಾವಳಿ, ಆಡಳಿತ, ಯುದ್ಧ, ಕಲೆ, ಧರ್ಮ ಇತ್ಯಾದಿಗಳಿಗೆ ಸಂಬಂಧಿಸಿದ ಕರ್ನಾಟಕದ ಇತಿಹಾಸವನ್ನು ಬರೆಯಲು ನೆರವಾಗುವ ಸಾಧನ(ಮೂಲಾಧಾರಗಳು)ಗಳಾಗಿವೆ. ಭಾರತದ ಇತಿಹಾಸದ ಸಾಧ್ಯತೆಗಳ ಸ್ವರೂಪವೇ ಪ್ರಾಚೀನ-ಮಧ್ಯಯುಗಗಳಿಗಷ್ಟೇ ಅಲ್ಲ, ಸ್ವಲ್ಪ ಮಟ್ಟಿಗೆ ಆಧುನಿಕ ಕಾಲದ ಇತಿಹಾಸ ರಚನೆಗೂ ನಾವು ಶಾಸನಗಳನ್ನೇ ಅವಲಂಬಿಸಬೇಕು. ಕೆಲವೊಂದು ಕೈಫಿಯತ್ತುಗಳು, ಬಖೈರುಗಳು ಕಾಲಾನುಕ್ರಮಣಿಕೆಗಳ "ಇತಿಹಾಸದ ಪ್ರಮಾಣಭೂತವಾದ ಪುನರ್ ನಿರ್ಮಾಣಕ್ಕೆ ಇರುವ ಅತಿ ಪ್ರಮುಖವಾದ ಆಧಾರಗಳೆಂದರೆ ಶಾಸನಗಳು. ಕನ್ನಡ ಸಾಹಿತ್ಯ, ಕಲಾಕೃತಿಗಳು, ನಾಣ್ಯಗಳು, ಪರದೇಶದ ಯಾತ್ರಿಕರ ವರದಿಗಳು, ಭೂಮಿಯ ಅಗೆತದಿಂದ ಹೊರಬಿದ್ದ ಅಂಶಗಳು-ಇವೆಲ್ಲವೂ ಸಹಾಯಕವಾದರೂ, ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಪರಂಪರೆಯನ್ನು ತಿಳಿಯುವಂತಾದುದು ಶಾಸನಗಳಿಂದಲೇ. ಇತರ ಆಧಾರಗಳು ತುಂಬಿಕೊಡಲಾರದ ಕೆಲವು ಅಂಶಗಳನ್ನು ಇಲ್ಲಿನ ಶಾಸನ ಸಂಪತ್ತು ಒದಗಿಸಿ ಕೊಟ್ಟಿತ್ತು"೨ ಎಂಬ ಅಭಿಪ್ರಾಯ ಮಹತ್ವದ್ದಾಗಿದೆ. ಈ ಮೂಲಕ ಶಾಸನಗಳು ಕರ್ನಾಟಕದ ಇತಿಹಾಸವನ್ನು ತಿಳಿಯಲು ನೆರವಾಗುತ್ತವೆ.

ಒಟ್ಟಾರೆಯಾಗಿ ಶಾಸನಗಳ ಅಧ್ಯಯನದ ಬಗ್ಗೆ ಹೇಳಬಹುದಾದುದು ಇಷ್ಟು; ೧೮ನೇ ಶತಮಾನದ ತನಕ ಇವುಗಳ ಅಧ್ಯಯನ ಆರಂಭವಾಗುವುದಿರಲಿ, ಇವುಗಳ ಮಹತ್ವದ ಅರಿವೂ ಇರಲಿಲ್ಲ. ಕ್ರಿ.ಶ. ೧೮೦೦ರಲ್ಲಿ ಕರ್ನಲ್ ಮೆಕೆಂಜಿ ಶಾಸನಗಳ ಅಧ್ಯಯನದಲ್ಲಿ ಆಸಕ್ತಿ ತೋರಿಸಿದರು. ಪರಿಣಾಮವಾಗಿ ಸುಮಾರು ೧೮೩೬-೩೮ರ ಅವಧಿಯಲ್ಲಿ ಶಾಸನಗಳ ಅಧ್ಯಯನ ಚುರುಕುಗೊಂಡಿತು. ೧೮೬೮-೭೦ರ ವೇಳೆಗೆ ಶಾಸನಾಧ್ಯಯನ ಒಂದು ನಿರ್ದಿಷ್ಟತೆಯನ್ನು ಪಡೆಯಿತು ಎಂಬುದನ್ನು ಎಲ್ಲರ ಅಭಿಮತವಾಗಿದೆ.

ಈ ಶಾಸನಗಳು ವಸ್ತು ವಿಷಯಾಧಾರಿವಾಗಿ ವೈವಿಧ್ಯತೆಯನ್ನು ಕಾಪಾಡಿಕೊಂಡಿವೆ. ಈ ಹಿನ್ನೆಲೆಯಲ್ಲಿಯೇ ಇವುಗಳನ್ನು ವಿಭಾಗಿಸಿಕೊಳ್ಳುವ ಕ್ರಮವನ್ನು ಅನುಸರಿಸಲಾಗುತ್ತಿದೆ. ೧.ಪ್ರಶಸ್ತಿ ಶಾಸನ. ೨.ದಾನ ಶಾಸನ. ೩.ವೀರಗಲ್ಲು ಶಾಸನ. ೪.ಮಾಸ್ತಿಕಲ್ಲು. ೫.ಸಲ್ಲೇಖನ ಶಿಲೆ.೬.ವಿಗ್ರಹದ ಮೇಲಿನ ಬರವಣಿಗೆ.೭.ಬಂಡೆಗಳ ಮೇಲಿನ ಬರಹ. ೮.ಕೂಟ ಶಾಸನ. ೯.ಯೂಪಶಾಸನ. ೧೦.ಇತರ ಶಾಸನಗಳು ಹೀಗೆ ಹತ್ತು ಬಗೆಯಾಗಿ ಶಾಸನಗಳನ್ನು ವರ್ಗೀಕರಿಸಲಾಗಿದೆ. ಈ ವಿಭಾಗ ಕ್ರಮದಲ್ಲಿರುವ ದೋಷವೆಂದರೆ ಯಾವ ಶಾಸನದಲ್ಲಿಯೂ ನಿರ್ದಿಷ್ಟವಾಗಿ ಒಂದೇ ವಿಷಯ ಬರಬೇಕೆಂದಿಲ್ಲ; ಅಲ್ಲಿ ದಾನಶಾಸನಗಳಲ್ಲಿ ರಾಜನ ವಿಷಯ ಬರಬಹುದು. ವೀರಗಲ್ಲುಗಳಲ್ಲಿ ದಾನದ ವಿಷಯ ಬರಬಹುದು. ಆದ್ದರಿಂದ ಯಾವ ಒಂದೇ ವರ್ಗಕ್ಕೂ ಶಾಸನ ವಿಭಾಗವನ್ನು ಅನ್ವಯಿಸಲು ಸಾಧ್ಯವಿಲ್ಲ. ಆದರೆ ಈ ವಿಭಜನೆ ಶಾಸನಗಳ ಅಧ್ಯಯನಕ್ಕೆ ಸಹಕಾರಿಯಾಗಿದೆ. ಈ ವಿಭಾಗಕ್ರಮವನ್ನು ನಮ್ಮ ಎಲ್ಲ ಶಾಸನ ಶಾಸ್ತ್ರಜ್ಞರು ಅನುಸರಿಸಿಕೊಂಡು ಬಂದಿದ್ದಾರೆ.

ಪ್ರಶಸ್ತಿ ಶಾಸನಗಳು ರಾಜನ ವಂಶ, ರಾಜನ ಹೆಸರು, ಅವನ ಆಳ್ವಿಕೆಯ ಕಾಲ, ಅವನ ಗುಣಗಳು, ಶೌರ್ಯ, ಔದಾರ್ಯ, ಧರ್ಮಶ್ರದ್ಧೆ ಇವುಗಳನ್ನು ಪ್ರಶಸ್ತಿ ಶಾಸನಗಳು ಒಳಗೊಂಡಿರುತ್ತವೆ. ದಾನ ಶಾಸನಗಳಲ್ಲಿ ಒಬ್ಬ ವ್ಯಕ್ತಿಗೆ, ಇಲ್ಲವೆ ಒಂದು ಸಂಸ್ಥೆಗೆ, ಇಲ್ಲವೆ ದೇವಾಲಯಕ್ಕೆ, ಇಲ್ಲವೆ ಜನತೆಯ ಅನುಕೂಲಕ್ಕಾಗಿ ಬೇರೊಬ್ಬರು ಮಾಡಿದ ದಾನದ

ವಿಷಯ ಇರುತ್ತದೆ. ಇದನ್ನು ದಾನ ಕೊಟ್ಟವನು ಇಲ್ಲವೆ ಕೊಟ್ಟವರ ಹೆಸರು, ಯಾರಿಗೆ, ಯಾವುದಕ್ಕೆ, ಏತಕ್ಕಾಗಿ ಕೊಟ್ಟಿದ್ದು ಮುಂತಾದ ವಿಷಯಗಳ ಉಲ್ಲೇಖವಿರುತ್ತದೆ. ವೀರಗಲ್ಲುಗಳು ಕರ್ನಾಟಕದ ಬಹುಭಾಗಗಳಲ್ಲಿ ಕಾಣಿಸುತ್ತವೆ. ಕನ್ನಡ ನಾಡಿನ ವೀರಯುಗದಲ್ಲಿ ಅಸಂಖ್ಯಾತ ವೀರರು ಸ್ವಾಮಿ ಭಕ್ತಿಗಾಗಿ, ಸಮಾಜ ಸೇವೆಗಾಗಿ, ಶಿಷ್ಟರ ರಕ್ಷಣೆಗಾಗಿ, ದುಷ್ಟರ ಶಿಕ್ಷೆಗಾಗಿ ಕಾದಿ(ಹೋರಾಡಿ) ಮಡಿದಿದ್ದಾರೆ. ಅವರ ನೆನಪಿಗಾಗಿ ರಾಜರು ಅಥವಾ ಊರಿನವರು ಅಥವಾ ಕಾದಿ ಮಡಿದವರ ಬಂಧುಗಳು ಈ ವೀರಗಲ್ಲುಗಳನ್ನು ಸ್ಥಾಪಿಸಿರುತ್ತಾರೆ. ಮಾಸ್ತಿಕಲ್ಲುಗಳು ವೀರಗಲ್ಲಿನ ಜಾತಿಗೆ ಸೇರಿದವುಗಳು. ಪತಿಭಕ್ತಿಪಾರಾಯಣೆಯರಿಗೆ 'ಸತಿ' ಎಂದು ಹೆಸರು. ಪತಿ ಸ್ವರ್ಗಸ್ಥನಾದರೆ ಪತಿಯೊಡನೆ ಸಹಗಮನ ಮಾಡುವ ಪದ್ಧತಿ ಬಹಳ ಕಾಲದಿಂದಲೂ ಇತ್ತು. ಇದು ಮಹಾಪವಿತ್ರ ಕಾರ್ಯವೆಂದು ಪರಿಗಣಿತವಾಗಿತ್ತು. ಸತಿಪೂಜೆ ಪುಣ್ಯಕರವೆಂದು ಅಂಗೀಕೃತವಾಗಿ ಮಹಾಸತಿಯರ ನೆರಳನ್ನು ಸೂಚಿಸುವ ಮಾಸ್ತಿಕಲ್ಲುಗಳು ನಿರ್ಮಿತವಾಗಿವೆ. ಸಲ್ಲೇಖನ ಶಿಲೆಗೆ ನಿಷಿಧಿಕಲ್ಲು ಎಂಬ ಹೆಸರಿದೆ. ಜೈನರು ಅವಸಾನಕಾಲ ಸಮೀಪಿಸಿತೆಂದು ತೋರಿದಾಗ, ಯಾವುದಾದರೊಂದು ಪವಿತ್ರ ಕ್ಷೇತ್ರಕ್ಕೆ ಹೋಗಿ ನಿರಶನವ್ರತದಿಂದ ದೇಹವನ್ನು ಕೊನೆಗಾಣಿಸುತ್ತಾರೆ. ಇಂಥವರ ಸ್ಮಾರಕವಾಗಿ ಶಾಸನಗಳನ್ನು ನಿಲ್ಲಿಸುವ ಪದ್ಧತಿ ನಮ್ಮ ರಾಜ್ಯದಲ್ಲಿತ್ತು. ವಿಗ್ರಹದ ಮೇಲಿನ ಬರವಣಿಗೆಗಳನ್ನು ಯಾವ ಶಾಸನಗಳ ಗುಂಪಿಗೂ ಸೇರಿಸಲಾಗುವುದಿಲ್ಲ. ಘನವಸ್ತುವಿನ ಮೇಲೆ ಬರೆದಿರುವುದರಿಂದ ಶಾಸನಗಳು ಎನ್ನಬೇಕಾಗಿದೆ. ವಿಗ್ರಹಗಳನ್ನು ಕಡೆದ ಶಿಲ್ಪಿಗಳ ಹೆಸರು ವಿಗ್ರಹದ ಭಾಗದಲ್ಲಿರುವುದುಂಟು. ಲೋಹದ ವಸ್ತುವಾದರೆ ಪೀಠದ ಮೇಲೆ ದಾನ ಮಾಡಿದವರ ಹೆಸರುಗಳಿರುವುದುಂಟು. ಈ ರೀತಿಯ ಶಾಸನಗಳು ಮುಖ್ಯವಾಗಿ ಶಿಲೆ ಮತ್ತು ಲೋಹಗಳಲ್ಲಿ ರಚನೆಯಾಗಿವೆ. ಬಂಡೆಗಳ ಮೇಲೆ ಕೆಲವು ಹೆಸರುಗಳು ವ್ಯಕ್ತವಾಗಿರುವುದುಂಟು. ನಿದರ್ಶನಕ್ಕೆ ಶ್ರವಣಬೆಳಗೊಳದ ಗೊಮ್ಮಟ ಶಿಲ್ಪದ ಪಾದಫಲಕದ ಭಾಗದಲ್ಲಿ 'ಶ್ರೀ ಕವಿರತ್ನ ಚಾವುಂಡರಾಯಂ ಮಾಡಿಸಿದಂ' ಮುಂತಾದ ಉಲ್ಲೇಖಗಳು ಕಾಣುತ್ತವೆ. ಕೂಟ ಶಾಸನಗಳು ಶಾಸನಗಳಲ್ಲಿ ಒಂದು ವಿಧವಾಗಿವೆ. 'ಕೂಟ' ಎಂದರೆ ಮೋಸ, ಕಪಟ, ಕೃತಕ ಎಂಬರ್ಥಗಳಿವೆ. ಯಾವುವು ನಿಜವಾದ ಶಾಸನಗಳಲ್ಲವೋ, ಕೃತಕವಾಗಿ ನಿರ್ಮಿಸಿ ಮೋಸ ಮಾಡುವ ಕಾರ್ಯಕ್ಕಾಗಿ ಯಾವುವು ಬಳಸಲ್ಪಡುತ್ತವೆಯೋ ಅವುಗಳೇ ಕೂಟ ಶಾಸನಗಳು. ಯೂಪ ಶಾಸನ ಎಂದರೆ, ಪ್ರಾಚೀನ ಕಾಲದಲ್ಲಿ ಯಜ್ಞ ಮಾಡುವಾಗ ಬಲಿಕೊಡಲೆಂದು ತಂದ ಪ್ರಾಣಿಯನ್ನು ಒಂದು ಶಿಲೆ ಅಥವಾ ಕಂಬವನ್ನು ನೆಟ್ಟು ಕಟ್ಟುತ್ತಿದ್ದರು. ಆ ಕಂಬದ ಮೇಲೆ ಯಜ್ಞ ಮಾಡುವ ಉದ್ದೇಶವನ್ನು ಕುರಿತು ಬರೆಯುತ್ತಿದ್ದರು. ಅಂತಹ ಬರವಣಿಗೆಯುಳ್ಳ ಯಜ್ಞದ ಸ್ತಂಭಗಳೇ ಯೂಪ ಶಾಸನಗಳು. ಇತರ ಶಾಸನಗಳ ಗುಂಪಿಗೆ ಅಶೋಕನ ಶಾಸನಗಳು, ಕುಡುಮಿಯಾ ಮಲೈ ಶಾಸನ ಮುಂತಾದವುಗಳನ್ನು ಸೇರಿಸಬಹುದು. ಹೀಗೆ ವೈವಿಧ್ಯತೆಯಿಂದ ಕಂಗೋಳಿಸುವ ಶಾಸನಗಳಲ್ಲಿ ಕರುನಾಡಿನ ಚರಿತ್ರೆ, ಭಾಷಾ ಶೈಲಿ, ರಾಜಕೀಯ ಘಟನಾವಳಿ, ಸಾಂಸ್ಕೃತಿಕ ಗರಿಮೆ, ಸಾಮಾಜಿಕ ನೈತಿಕತೆ, ಧಾರ್ಮಿಕ ಸಾಮರಸ್ಯ, ಶತ್ರುವನ್ನು ಸ್ನೇಹಿತನೆಂದ ಪರಿಗಣಿಸುವ ವೀರತ್ವ, ಆಳ-ಅರಸರೆಂಬ ಕಂದಕಕ್ಕೆ ತಿಲಾಂಜಲಿ ನೀಡುವ ಕನ್ನಡಿಗರ ಸ್ವಾಭಿಮಾನ ಮೊದಲಾದ ವಸ್ತು ವೈವಿಧ್ಯತೆಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಅಂತಹ ಶಾಸನಗಳ ವೈವಿಧ್ಯಮಯ ಜಗತ್ತನ್ನು ಅನಾವರಣ ಮಾಡುವ ಉದ್ದೇಶ ನನ್ನ ಈ ಲೇಖನದ್ದಾಗಿದೆ. ಇಲ್ಲಿ ಮುಖ್ಯವಾಗಿ ಕನ್ನಡ ನಾಡಿಗೆ ಸಂಬಂಧಿಸಿದ ಪ್ರಮುಖ ಶಾಸನಗಳ ವಸ್ತು ವಿಷಯಗಳ ಗರಿಮೆಯ ಸಂಕ್ಷಿಪ್ತತೆಯ ಬರವಣಿಗೆಗೆ ನಾನಿಲ್ಲಿ ಅದ್ಯತೆ ನೀಡಿದ್ದೇನೆ.

'ಕಾಕುಸ್ಥವರ್ಮನ ತಾಳಗುಂದದ ಸ್ತಂಭ ಶಾಸನ'ವು ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪದ ಸಮೀಪದ ತಾಳಗುಂದದಲ್ಲಿರುವ, ಶಾತವಾಹನರ ರಾಜ ಸಾತಕರ್ಣಿ ನಿರ್ಮಿಸಿದ ಪ್ರಣವೇಶ್ವರ ದೇವಾಲಯದ ಹತ್ತಿರ ದೊರೆತಿರುವ ಸ್ತಂಭ ಶಾಸನವಾಗಿದೆ. ಕದಂಬರಿಗೆ ಸಂಬಂಧಪಟ್ಟ ಶಿಲಾ ಶಾಸನಗಳಲ್ಲೆ ಇದು ಅತ್ಯಂತ ಪ್ರಮುಖವಾದುದು. ಇದನ್ನು 'ಕಾಕುಸ್ಥವರ್ಮನ ಪ್ರಶಸ್ತಿ ಶಾಸನ' ಎಂದು ಕರೆಯಲಾಗಿದೆ. ಅವನ ಗುಣಗಳನ್ನೂ, ಸತ್ಕಾರ್ಯಗಳನ್ನು ವರ್ಣಿಸುವುದೆ ಅಲ್ಲದೆ, ತಾಳಗುಂದದಲ್ಲಿ ಕೆರೆಯನ್ನು ಕಟ್ಟಿಸಿದನೆಂದು ಹೇಳುತ್ತದೆ. "ಇವನ ವರ್ಣನೆ ಶಾಸನದಲ್ಲಿ ವಿಶೇಷವಾಗಿ ಮೂಡಿದೆ. ಇವನ ಕಾಲದಲ್ಲಿ ಕದಂಬವಂಶ ಅತ್ಯುನ್ನತ ಸ್ಥಿತಿಯನ್ನು ಮುಟ್ಟಿತೆನ್ನಬಹುದು.

ಇವನು ಎಷ್ಟು ಪರಾಕ್ರಮಿಯೋ ಅಷ್ಟೇ ಪ್ರಜ್ಞಾವಂತನೂ, ಆಡಳಿತ ವಿಚಕ್ಷಣನೂ, ಪ್ರಜಾನುರಾಗಿಯೂ ಆಗಿದ್ದನು. ತನ್ನ ಮೊದಲನೆಯ ಮಗಳನ್ನು ವಾಕಾಟಕ ರಾಜನಾದ ನರೇಂದ್ರ ಸೇನನಿಗೂ, ಎರಡನೆಯ ಮಗಳನ್ನು ಗುಪ್ತ ರಾಜನಿಗೂ ಮದುವೆ ಮಾಡಿಕೊಟ್ಟು ಆ ರಾಜರೊಡನೆ ಸಂಬಂಧವನ್ನು ಬೆಳೆಸಿದ್ದನು. ಈ ಕಾಕುಸ್ಥವರ್ಮನೇ ತಾಳಗುಂದದಲ್ಲಿ ಪ್ರಣವೇಶ್ವರ ದೇವಾಲಯದ ಮುಂದೆ ಕೆರೆಯನ್ನು ಕಟ್ಟಿಸಿದನು"೩ ಎಂಬುದು ತಿಳಿಯುತ್ತದೆ. ಮಯೂರಶರ್ಮನ ಚಂದವಳ್ಳಿಯ ಬಂಡೆ ಶಾಸನವನ್ನು ಬಿಟ್ಟರೆ, ಕದಂಬರ ಅತ್ಯಂತ ಪ್ರಾಚೀನ ಶಾಸನ ಇದಾಗಿದೆ. ಕರ್ನಾಟಕವನ್ನು ಮೊಟ್ಟ ಮೊದಲಿಗೆ ಆಳಿದ ಕನ್ನಡ ದೊರೆಗಳೆ ಕದಂಬರು ಎಂಬುದನ್ನು ಈ ಶಾಸನ ದಾಖಲಿಸುತ್ತದೆ. ಜೊತೆಗೆ ಪರೋಪಕಾರಿಯ ಸನ್ನಡತೆಗಳನ್ನು ದಾಖಲಿಸುತ್ತದೆ. ಈ ಮೂಲಕ ಕನ್ನಡಿಗರ ಮೊದಲ ರಾಜವಂಶ ಕದಂಬ ಎಂಬುದು ತಿಳಿಯುತ್ತದೆ.

ಕನ್ನಡದ ಮೊತ್ತ ಮೊದಲ ಉಪಲಬ್ಧ ಶಾಸನವೆಂದು ಹೆಸರಾಗಿರುವುದು 'ಹಲ್ಮಿಡಿ ಶಾಸನ'. ಇದು ಕನ್ನಡಿಗರ ಪ್ರಾಚೀನತೆ, ಇತಿಹಾಸ, ಭಾಷೆ, ಸಂಸ್ಕೃತಿ, ಆಚಾರವಿಚಾರ, ಶೌರ್ಯಸಾಹಸಗಳಿಗೆಲ್ಲ ಮತ್ತೆಮತ್ತೆ ಉಲ್ಲೇಖವಾಗುತ್ತಲೇ ಇರುವ ಶಾಸನ. "ಕನ್ನಡ ನಾಡಿನಲ್ಲಿ ಕ್ರಿಸ್ತ ಪೂರ್ವದ ಹಿಂದಿನಿಂದಲೂ ಶಾಸನಗಳು ದೊರೆಯುತ್ತವೆಯಾದರೂ ಕನ್ನಡದ ಬಾಯ್ನುಡಿ ಸಾಹಿತ್ಯದ ಗದ್ದುಗೆಯೇರಿ ಬರಹ ರೂಪದಲ್ಲಿ ಮೊಟ್ಟಮೊದಲು ನಮಗೆ ಕಾಣಿಸಿಕೊಳ್ಳುವುದು ಹಲ್ಮಿಡಿಯ ಶಾಸನದಲ್ಲಿ. ಇದನ್ನು ಮೊದಲು ಕಂಡುಹಿಡಿದ ಕೀರ್ತಿ ದಿವಂಗತ ಎಂ.ಎಚ್.ಕೃಷ್ಣರವರಿಗೆ ಸಲ್ಲುತ್ತದೆ. ಅಳಕದಂಬನೆಂಬ ರಾಜನು ವಿಜರಸನೆಂಬುವನಿಗೆ ಎರಡು ಗ್ರಾಮಗಳನ್ನು ದತ್ತಿಯಾಗಿ ಕೊಟ್ಟದ್ದು ಇದರ ತಿರುಳು. ಲಿಪಿ, ಭಾಷೆ, ರಾಜನ ಹೆಸರು ಇವುಗಳ ಆಧಾರದ ಮೇಲೆ ಇದರ ಕಾಲ ಕ್ರಿ.ಶ. ೪೫೦ ಎಂಬುದಾಗಿ ಕೃಷ್ಣ ನಿರ್ಧರಿಸಿದ್ದಾರೆ."೪ ಶಾಸನದಲ್ಲಿ ಪ್ರೌಢವಾದ ಭಾಷೆ ಬಳಕೆಯಾಗಿದೆ. ಹತ್ತು ಮಾತಿನಲ್ಲಿ ಹೇಳುವುದನ್ನು ಒಂದು ಮಾತಿನಲ್ಲಿ ಹೇಳಿರುವುದು ಕಂಡುಬರುತ್ತದೆ. ಎಂ.ಹೆಚ್. ಕೃಷ್ಣ ಅವರು ಕ್ರಿ.ಶ. ೪೫೦ರ ಸಮಯದಲ್ಲೇ ಸಂಸ್ಕೃತ ಮತ್ತು ಕನ್ನಡ ಪರಸ್ಪರ ಶಬ್ದಗಳನ್ನು ವಿನಿಮಯ ಮಾಡಿಕೊಂಡಿರುವುದು ಕಂಡುಬರುತ್ತದೆ ಎಂದಿದ್ದಾರೆ. ೫ನೇ ಶತಮಾನದಲ್ಲಿ ಕನ್ನಡ ಜನಸಾಮಾನ್ಯರ ಭಾಷೆಯಾಗಿತ್ತು. ಕನ್ನಡವನ್ನು ಸಾಮಾನ್ಯರು ಮಾತ್ರ ಬಳಸಿ, ವಿದ್ಯಾವಂತರು ಸಂಸ್ಕೃತ ಬಳಸುತ್ತಿದ್ದರು ಎಂಬುದು ಇದರಿಂದ ತಿಳಿದುಬರುತ್ತದೆ. ಹಾಗೆಯೆ ಎಲAಿ್ಲಭಟರಿಯನ ಮಗನಾದ ವಿಜ ಅರಸ ಮೂಳಿವಳ್ಳಿ ಮತ್ತು ಹಲ್ಮಿಡಿಗಳನ್ನು ಪಲ್ಲವರ ಮಾಂಡಲೀಕರಾದ ಮೃಗೇಶ ಮತ್ತು ನಾಗ ಎಂಬುವವರಿಗೆ ದಾನ ಕೊಟ್ಟಿದ್ದನ್ನು ಈ ಶಾಸನ ಹೇಳುತ್ತದೆ. ಈ ಮೂಲಕ ದಾನ ನೀಡುವ ಪದ್ಧತಿಯು ಕನ್ನಡಿಗರ ಉಸಿರಲ್ಲಿಯೇ ಒಂದಾಗಿರುವುದು ತಿಳಿಯುತ್ತದೆ.

ಒಟ್ಟಾರೆಯಾಗಿ ಕನ್ನಡದ ಮೊದಲ ಶಾಸನವಾದ ಹಲ್ಮಿಡಿ ಭಾಷಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ನಾಡಿನ ಹಿರಿಮೆಯ ಧ್ಯೋತಕವಾಗಿದೆ. ನಮ್ಮ ಭಾಷಾ ಇತಿಹಾಸವನ್ನು ನಿರ್ಧರಿಸುವಲ್ಲಿ ಅದರ ಪಾತ್ರ ಹಿರಿದಾಗಿದೆ.

'ತಮಟಕಲ್ಲು ಶಾಸನ'ವು ಚಿತ್ರದುರ್ಗ ಜಿಲ್ಲೆಯ ತಮಟಕಲ್ಲು ಎಂಬ ಹಳ್ಳಿಯಲ್ಲಿ ಕಂಡುಬAದಿದೆ. ಈ ಶಾಸನದ ಕಾಲ ಸುಮಾರು ಕ್ರಿ.ಶ.೫೦೦. ಈ ಶಾಸನವು ಎಪಿಗ್ರಾಫಿಯ ಕರ್ನಾಟಕದ ಸಂಪುಟ-೬ರಲ್ಲಿ ೪೨ ಮತ್ತು ೪೩ನೇ ಶಾಸನಗಳಿದ್ದು ಇದರಲ್ಲಿರುವ ೪೩ನೇ ಶಾಸನವೆ ತಮಟಕಲ್ಲು ಶಾಸನ. ಈ ಶಾಸನವು ನಾಲ್ಕು ಸಾಲುಗಳಿಂದ ಕೂಡಿದೆ. ಕನ್ನಡಿಗರ ವೀರ ಪರಂಪರೆಯನ್ನು ಗುರುತಿಸುವಲ್ಲಿ ಈ ಶಾಸನವು ಒಂದು ದಾಖಲೆಯಾಗಿ ದೊರೆತಿದೆ. ಪ್ರಾಚೀನ ಕರ್ನಾಟಕದ ಜನತೆಯು ನಾಡು, ನುಡಿ ಮತ್ತು ಸ್ವಾಮಿನಿಷ್ಠೆಗಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟಿದ್ದ ಸಂದರ್ಭಗಳನ್ನು ನೋಡಿದರೆ ಈ ಶಾಸನದಲ್ಲಿ ಉಕ್ತವಾಗಿರುವ ವಿಷಯವು ಅತಿಶಯೋಕ್ತಿಯಲ್ಲ. ಕರ್ನಾಟಕದ ಇತಿಹಾಸದಲ್ಲಿ ಚಾಲುಕ್ಯರು ಮತ್ತು ಹೊಯ್ಸಳರ ಚರಿತ್ರೆಯನ್ನು ಗಮನಿಸಿದರೆ 'ಗರುಡ'ರೆಂಬ ವೀರಯೋಧರ ಚರಿತ್ರೆ ಅನಾವರಣಗೊಳ್ಳುತ್ತದೆ. ಇದು ಗುಣಮಧುರಾಂಕನ ಚೆಲುವು-ಒಲವು, ಸಾಹಸ-ಶೌರ್ಯಗಳು ಮತ್ತು ಅವನ ಗುಣಗಳನ್ನು ಮನತುಂಬಿ ವರ್ಣಿಸುತ್ತದೆ. ಈ ವೀರರ ಚರಿತ್ರೆಯ ಹಿನ್ನೆಲೆಯಲ್ಲಿ ತಮಟಕಲ್ಲು ಶಾಸನದಲ್ಲಿ

ಉಲ್ಲೇಖಗೊಂಡಿರುವ 'ಗುಣಮಧುರಾಂಕ' ಕಂಡುಬರುತ್ತಾನೆ. ಈ 'ಗುಣಮಧುರಾಂಕ'ನ ಮೂಲಕ ಕನ್ನಡಿಗರ ಶೌರ್ಯತ್ವವನ್ನು ಶಾಸನವು ತೆರೆದಿಡುತ್ತದೆ.

'ಗಂಗ ಮಾಧವನ ತಾಮ್ರ ಶಾಸನ'ವು ೫ನೇ ಶತಮಾನಕ್ಕೆ ಸೇರಿದ್ದು. ಇದು ಗಂಗರ ಇಮ್ಮಡಿ ಮಾಧವನ ಕಾಲದ್ದು. ಇವನು 'ರ್‍ವಿ' ಎಂಬ ಊರಿನಲ್ಲಿ ಬ್ರಾಹ್ಮಣನೊಬ್ಬನಿಗೆ ದತ್ತಿ ಬಿಟ್ಟ ವಿಷಯ ಹೇಳುತ್ತದೆ. ಅಲ್ಲದೆ, ಈ ಶಾಸನದಲ್ಲಿ ಇವನಿಗಿಂತ ಮೂರು ಜನ ದೊರೆಗಳ ಬಗ್ಗೆ ಉಲ್ಲೇಖವಿದೆ. ಈ ವಂಶದ ಅರಸರ ಕಾಲಘಟ್ಟವನ್ನು ಕೂಡ ಈ ಶಾಸನ ಉಲ್ಲೇಖ ಮಾಡುತ್ತದೆ. ಈ ಶಾಸನದ ಅಧ್ಯಯನದಿಂದ ಗಂಗರ ಚರಿತ್ರೆ, ಅವರ ವಂಶಾವಳಿ, ಅಂದಿನ ಕನ್ನಡ ರಾಜರು ಅನುಸರಿಸಿಕೊಂಡು ಬಂದ ದಾನ ಧರ್ಮಗಳನ್ನು ಎತ್ತಿಹಿಡಿಯುತ್ತದೆ. ಈ ಶಾಸನದ ಮತ್ತೊಂದು ವಿಶೇಷವೆಂದರೆ ವಿದ್ಯಾಭ್ಯಾಸದ ಕುರಿತ ಚರಿತ್ರೆಯ ದಾಖಲೆಗಳನ್ನು ಹೊಂದಿದೆ. ವರ್ಣಾಶ್ರಮ ಪದ್ಧತಿ ಪ್ರಬಲವಾಗಿದ್ದಾಗ, ಸಾಂಪ್ರದಾಯಿಕ ವಿದ್ಯಾಭ್ಯಾಸಕ್ಕಾಗಿ ರಾಜರು ದತ್ತಿ ಕೊಡುತ್ತಿದ್ದ÷ವಿಷಯ ತಿಳಿದುಬರುತ್ತದೆ. ಈ ಮೂಲಕ ಶಿಕ್ಷಣಕ್ಕೆ ಒತ್ತು ನೀಡಿ ರಾಜ್ಯದ ಅಭಿವೃದ್ಧಿ ಕಂಡ ಸುಸಂಸ್ಕೃತ ಕನ್ನಡಿಗರ ಗುಣವನ್ನು ಗುರುತ್ತಿಸುತ್ತದೆ.

'ರವಿಕೀರ್ತಿ ಐಹೊಳೆ ಶಾಸನ'ವು ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನ, ಐಹೊಳೆಯ ಮೇಗುತಿ ದೇವಾಲಯದಲ್ಲಿದೆ. ಪೂರ್ವ ದಿಕ್ಕಿನ ಗೋಡೆಯಲ್ಲಿ ಈ ಶಾಸನವನ್ನು ಕೆತ್ತಲಾಗಿದೆ. ಇದನ್ನು ಮೊದಲು ಪ್ರಕಟಿಸಿದವರು ಡಾ.ಜೆ.ಎಂ.ಫ್ಲೀಟ್. ದಾಕ್ಷಿಣಾತ್ಯ ಬ್ರಾಹ್ಮಿಲಿಪಿಯಲ್ಲಿರುವ ಈ ಶಾಸನದ ಕಾಲ ಕ್ರಿ.ಶ. ೬೩೪. ಶಾಸನದಲ್ಲಿ ಒಟ್ಟು ೧೯ ಸಾಲುಗಳಿವೆ. ಅಕ್ಷರಗಳನ್ನು ಸುಂದರವಾಗಿ ಒಂದೇ ಅಳತೆಯಲ್ಲಿ ಕೆತ್ತಲಾಗಿದೆ. ಈ ಶಾಸನವಿರುವ ಐಹೊಳೆ ಪ್ರದೇಶದಲ್ಲಿ ಸುಮಾರು ೭೦ ದೇವಾಲಯಗಳಿವೆ. ಇವುಗಳಲ್ಲಿ ಚಾಲುಕ್ಯ ಶೈಲಿಯ ವಿಕಾಸವನ್ನು, ದೇವಾಲಯಗಳ ನಿರ್ಮಾಣದಲ್ಲಿ ಚಾಲುಕ್ಯರು ಮಾಡಿದ ವಿವಿಧ ಪ್ರಯೋಗಗಳನ್ನು ಕಾಣಬಹುದು. ಈ ಶಾಸನದ ಮೂಲಕ ಕನ್ನಡ ನಾಡಿನ ವಾಸ್ತುಶಿಲ್ಪ ಮತ್ತು ಕಲೆಯ ಉತ್ಕೃಷ್ಟತೆಯನ್ನು ಸಾರುತ್ತದೆ. 'ರಸಿಕರ ಕಂಗಳ ಸೆಳೆಯುವ ನೋಟ' ಹೇಳಿಕೆಗೆ ಅಭಿನ್ನವಾಗಿ, ಜೀವಂತ ಸಾಕ್ಷಿಯಾಗಿರುವ ಬಾದಾಮಿ, ಐಹೊಳೆ, ಪಟ್ಟದಕಲ್ಲು ಮೊದಲಾದ ವಾಸ್ತುಶಿಲ್ಪದ ತೊಟ್ಟಿಲುಗಳ ಬಗೆಗೆ ಈ ಶಾಸನವು ಬೆಳಕು ಚೆಲ್ಲುತ್ತದೆ.

ಕರ್ನಾಟಕದಲ್ಲಿ ವಿರಳವಾಗಿ ದೊರೆಯುವ ಬಂಡೆಗಲ್ಲು ಶಾಸನಗಳಲ್ಲಿ 'ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ'ವು ಒಂದಾಗಿದೆ. ಬಾದಾಮಿಯ ಕಪ್ಪೆ ಅರಭಟ್ಟನ ಶಾಸನವು ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಬಾದಾಮಿಗೆ ಸಮೀಪದಲ್ಲಿರುವ ತಟ್ಟುಕೋಟೆ ಎಂಬ ಸ್ಥಳದ ವಾಯವ್ಯ ದಿಕ್ಕಿನಲ್ಲಿದೆ. ಈ ಶಾಸನದಲ್ಲಿ ೧೦ ಸಾಲುಗಳಿದ್ದು, ೧ ಮತ್ತು ೨ನೇ ಸಾಲುಗಳು ಅನುಸ್ಯೂತವಾಗಿ ಓದಬಹುದಾದ ಗದ್ಯದಲ್ಲಿದೆ. ೩ ಮತ್ತು ೪ನೇ ಸಾಲುಗಳು ಒಂದು ಸುಭಾಷಿತದಂತಹ ಸಲಕ್ಷಣ ಅನುಷ್ಟುಪ್ ಶ್ಲೋಕವಾಗಿದೆ. ನಂತರ ಮೂರು ತ್ರಿಪದಿಗಳನ್ನು ಒಳಗೊಂಡಿದೆ. ಈ ಶಾಸನವು ಮುಖ್ಯವಾಗಿ ಪ್ರಾಚೀನ ಕರ್ನಾಟಕದ ವೀರ ಜೀವನದ ಚಿತ್ರವೊಂದರ ಪರಂಪರೆಯನ್ನು ಕಟ್ಟಿಕೊಡುತ್ತದೆ. ಹೀಗಾಗಿ ನಾಡಿನ ಜನತೆಯ ಶೌರ್ಯ, ಸಾಹಸಗಳನ್ನು ನಮ್ಮ ಮುಂದಿಡುವ ಮೂಲಕ ಕನ್ನಡಿಗರ ವೀರತ್ವವನ್ನು ಮುಕ್ತಕಂಠದಿಂದ ಹೊಗಳುತ್ತದೆ. ಇಲ್ಲಿ ಚಿತ್ರಿತನಾಗಿರುವ ವೀರ ಕಪ್ಪೆ ಅರಭಟ್ಟನು ಶೂರನಷ್ಟೇ ಅಲ್ಲ, ಸಜ್ಜನ ಕೂಡ ಆಗಿದ್ದ ಎನ್ನುವುದು ಗಮನಿಸಬೇಕಾದ ಸಂಗತಿ. ಪ್ರಾಣಕ್ಕಿಂತ ಮಾನವೇ ಮುಖ್ಯವೆನ್ನುವ ನಂಬಿಕೆ ಬಲವಾಗಿದ್ದ ಸಂಗತಿಯನ್ನು ಈ ಶಾಸನ ಹೇಳುತ್ತದೆ. ಇಂತಹ ಕಪ್ಪೆ ಅರಭಟ್ಟನು ಒಳ್ಳೆಯ ಜನರಿಗೆ ಬೇಕಾದವನು, ಕೆಟ್ಟ ಜನರಿಗೆ ಬೇಡವಾದವನೂ ಆಗಿದ್ದನು ಎಂಬ ತಾತ್ಪರ್ಯವನ್ನು ಶಾಸನ ತನ್ನಲ್ಲಿ ಕೇಂದ್ರೀಕರಿಸಿಕೊAಡಿದೆ. ಕನ್ನಡಿಗರು ಶೌರ್ಯ ಪರಂಪರೆಯೊಂದಿಗೆ ಗುಣಸಂಪನ್ನರು ಆಗಿದ್ದರೆಂಬ ಐತಿಹಾಸಿಕ ಸತ್ಯ ಗೋಚರವಾಗುತ್ತದೆ.

'ಬೇಗೂರು ವೀರಗಲ್ಲು' ಶಿಲ್ಪದ ದೃಷ್ಟಿಯಿಂದ ಪ್ರಮುಖವಾಗಿದೆ. ಎರಡು ಹಂತದ ಶಿಲ್ಪ ವರ್ಣಗಳು ಈ ಶಾಸನದಲ್ಲಿದ್ದು, ಆಗಿನ ಕಾಲದ ಯುದ್ಧದ ಚಿತ್ರವನ್ನು ಸಮರ್ಥವಾಗಿ ಪ್ರತಿಬಿಂಬಿಸುತ್ತವೆ. ದೊಡ್ಡದಾದ ಒಂದು ಆನೆಯು ಸೊಂಡಿಲಿನಿAದ ಸೈನಿಕರನ್ನು ಎತ್ತಿ ಅಪ್ಪಳಿಸುತ್ತಿರುವುದು, ಕಾಲಿನಿಂದ ತುಳಿದು ಸಾಯಿಸುತ್ತಿರುವುದು,

ಆನೆಯ ಹಣೆಗೆ ಶತ್ರುಗಳು ಬಿಟ್ಟ ಬಾಣಗಳು ಚುಚ್ಚಿರುವುದು, ಕೆಲವು ವ್ಯಕ್ತಿಗಳು ಯುದ್ಧದಲ್ಲಿ ಗಾಯಗೊಂಡವರನ್ನು ಹೊತ್ತೊಯ್ಯುತ್ತಿರುವುದು, ಹೆಣಗಳನ್ನು ಕಾಗೆಗಳು ಕುಕ್ಕುತ್ತಿರುವುದು, ಒಬ್ಬರನ್ನೊಬ್ಬರು ಇರಿಯುತ್ತಿರುವುದು, ಕುದುರೆ ಸವಾರನನ್ನೂ, ಅವರ ಬಿಲ್ಲು, ಬಾಣ, ಬತ್ತಳಿಕೆ, ಗುರಾಣಿ, ಈಟಿ, ಗದೆ ಮುಂತಾದವುಗಳನ್ನು ಸೂಕ್ಷ್ಮವಾಗಿ ಬಿಡಿಸಲಾಗಿದೆ. ಹೀಗಾಗಿ, ಈ ಶಾಸನವು ಶಿಲ್ಪದ ದೃಷ್ಟಿಯಿಂದಲೂ ಪ್ರಮುಖವಾಗಿದೆ. ಈ ಬೇಗೂರು ವೀರಗಲ್ಲಿನಿಂದ ತಿಳಿಯುವ ಬಹುಮುಖ್ಯ ಅಂಶವೆಂದರೆ, "ಅಂದಿನ ಕಾಲದ ವೀರರು ಪರಾಕ್ರಮಕ್ಕೆ ಮತ್ತು ದಾನಕ್ಕೆ ಕೊಟ್ಟ ಬೆಲೆಯನ್ನು ಬೇರಾವುದಕ್ಕೂ ಕೊಟ್ಟಿರಲಿಲ್ಲ... ಪರಾಕ್ರಮವನ್ನು ತಮ್ಮ ಆದರ್ಶವಾಗಿಟ್ಟುಕೊಂಡಿದ್ದ ಅಂದಿನ ವೀರರು, ತಮ್ಮ ಪ್ರಾಣದ ಹಂಗನ್ನೂ ತೊರೆದು ಹೋರಾಡುತ್ತಿದ್ದರು"೫ ಎಂಬ ಸಂಗತಿ ಓದುಗರ ಗಮನಕ್ಕೆ ಬರದೇ ಇರುವುದಿಲ್ಲ.

'ಮುಮ್ಮಡಿ ಕೃಷ್ಣನ ಜೂರ ಶಾಸನ'ವು ಕನ್ನಡಿಗರು ಹೊರರಾಜ್ಯಗಳಲ್ಲಿಯೂ ತಮ್ಮ ಅಧಿಪತ್ಯ ಸ್ಥಾಪಿಸಿದ ಕುರಿತ ಲಿಖಿತ ದಾಖಲೆಯಾಗಿದೆ. ೩ನೇ ಕೃಷ್ಣನು ರಾಷ್ಟ್ರಕೂಟ ರಾಜರಲ್ಲಿ ಕೊನೆಯ ಸಮರ್ಥ ಚಕ್ರವರ್ತಿ. ಈ ಶಾಸನದ ಕಾಲ ಸುಮಾರು ೯೪೭. ಇದು ಹೊರರಾಜ್ಯದಲ್ಲಿ ದೊರೆತಿರುವ ಅಪೂರ್ವ ಕನ್ನಡ ಶಾಸನವಾಗಿದೆ. ಇದೊಂದು ಶಿಲಾಶಾಸನ. ಒಟ್ಟು ೩೭ ಸಾಲುಗಳಿಂದ ಕೂಡಿದೆ. ೩ ರಿಂದ ೧೩ರವರೆಗಿನ ಸಾಲುಗಳಲ್ಲಿ ಕೆಲವು ಅಕ್ಷರಗಳು ಅಳಿಸಿ ಹೋಗಿವೆ. ಲಿಪಿಯ ದೃಷ್ಟಿಯಿಂದ ೧೦ನೇ ಶತಮಾನದ ರಾಷ್ಟ್ರಕೂಟರ ಲಿಪಿಯಾಗಿದೆ. ಇಂದಿನ ಮಧ್ಯಪ್ರದೇಶದ ಜಬ್ಬಲ್ಪುರದ ಹತ್ತಿರ ದೊರಕಿದ ಶಾಸನವಾಗಿದೆ. ೩ನೇ ಕೃಷ್ಣ ಉತ್ತರ ಭಾರತದ ಮೇಲೆ ದಂಡಯಾತ್ರೆ ಕೈಗೊಂಡ ಸಂದರ್ಭದಲ್ಲಿ ಹಾಕಿಸಿದ್ದಾನೆಂದು ತಿಳಿಯಲಾಗಿದೆ. 'ಪರನಾರಿ ಸೋದರತ್ವ' ಎಂಬ ಮೌಲ್ಯವನ್ನು ಎತ್ತಿ ಹಿಡಿಯುವ ಮಹತ್ವದ ಶಾಸನ ಇದಾಗಿದೆ.

ರಾಷ್ಟ್ರಕೂಟರ ಕೊನೆಯ ಸಮರ್ಥ ದೊರೆಯಾದ ೩ನೇ ಕೃಷ್ಣನ ಸಚ್ಚಾರಿತ್ರ್ಯವನ್ನು ಈ ಶಾಸನ ಒಳಗೊಂಡಿದೆ. ಶಾಸನದಲ್ಲಿ ಮತ್ತೆಮತ್ತೆ 'ಪರಾಂಗನಾ ಪುತ್ರ' ಎಂಬ ಪದ ಉಲ್ಲೇಖಗೊಂಡಿದೆ. ಅಂದರೆ ಅನ್ಯಸ್ತ್ರೀಯನ್ನು ಸಹೋದರಿ ಎಂದು ಭಾವಿಸಿ, ಅನ್ಯ ಸ್ತ್ರೀಯು ಎದೆಹಾಲು ನೀಡಿ ಪೋಷಿಸಿದ ತಾಯಿಗಿಂತ ಮಿಗಿಲು ಎಂದು ವರ್ಣಿಸುತ್ತದೆ. ಅನ್ಯಸ್ತ್ರೀಯರಿಗೆ ಈತನ ಮನಸ್ಸು ಸೋಲುವುದಷ್ಟೆ ಅಲ್ಲ, ಆತನನ್ನು ಎತ್ತಿ ಆಡಿಸಿದ ತೋಳಾಗಿದೆ. ಈತನ ಪರನಾರಿ ಕುರಿತ ಪರಿಶುದ್ಧ ಚಾರಿತ್ರ್ಯವನ್ನು ಈ ಶಾಸನ ಕಟ್ಟಿಕೊಡುತ್ತದೆ.

'ಜಿನವಲ್ಲಭನ ಕುರಿಕ್ಯಾಲ ಶಾಸನ ಅಥವಾ ಜಿನವಲ್ಲಭನ ಗಂಗಾಧರಂ ಶಾಸನವು ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿದೆ. ಅಲ್ಲದೆ ಅನೇಕ ವಿಷಯಗಳ ಬಗ್ಗೆ ಹೊಸಬೆಳಕನ್ನು ಚೆಲ್ಲಿದೆ. ಈ ಶಾಸನದ ಕೇಂದ್ರ ವ್ಯಕ್ತಿ ಕನ್ನಡದ ಆದಿಕವಿ ಪಂಪನ ತಮ್ಮನಾದ ಜಿನವಲ್ಲಭ. ಈತನು ಮಾಡಿದ ಧಾರ್ಮಿಕ ಕಾರ್ಯಗಳನ್ನು ಮತ್ತು 'ಧರ್ಮಪುರಿ' ಎಂಬ ಅಗ್ರಹಾರವನ್ನು ತನ್ನ ಅಣ್ಣನಾದ ಪಂಪನಿಗೆ ದಾನವಾಗಿ ಕೊಟ್ಟಿದ್ದನ್ನು ಸಮರ್ಥಿಸಲು ಈ ಶಾಸನ ಹಾಕಿಸಿದ್ದಾನೆ. ಈ ಶಾಸನದಿಂದ ತಿಳಿದುಬಂದ ಹೊಸ ಸಂಗತಿಯೆಂದರೆ, ಶಾಸನದಲ್ಲಿ 'ತನ್ನ ತಾಯಿ ಬೆಳ್ವಲದ ಅಣ್ಣಿಗೇರಿಯ ಜೋಯಿಸ ಸಿಂಘನ ಮೊಮ್ಮಗಳು' ಎಂದು ಹೇಳಿರುವುದು ತಿಳಿದುಬರುತ್ತದೆ. ಪಂಪನ ಕಾವ್ಯಭಾಷೆ ಕನ್ನಡ ಎಂದು ಹೇಳಿದ್ದರೂ, ಅದು ಯಾವ ಪ್ರದೇಶದ ಕನ್ನಡ? ಪಂಪ ಪುಲಿಗೆರೆಯ ತಿರುಳ್ಗನ್ನಡದಲ್ಲಿ ಬರೆದೆ ಎಂದು ಹೇಳಿರುವುದರಿಂದ ಪುಲಿಗೆರೆಗೂ ಇವನಿಗೂ ಏನು ಸಂಬಂಧ? (ಪುಲಿಗೆರೆ ಈಗಿನ ಗದಗಿನ ಲಕ್ಷ್ಮೇಶ್ವರ) ಎಂಬ ಪ್ರಶ್ನೆಗಳಿದ್ದವು. ಈ ಶಾಸನ ದೊರೆಯುವುದಕ್ಕೆ ಮುಂಚೆ ಪಂಪನನ್ನು ತೆಲುಗಿನವರು ನಮ್ಮವನು ಎಂದಿದ್ದರು. ಆ ನಂತರ ಕನ್ನಡದವನು ಎಂಬುದು ನಿಶ್ಚಯವಾಯಿತು. ಪಂಪನ ಕಾವ್ಯಭಾಷೆಗೆ ಸಂಬಂಧಿಸಿದ ಒಂದು ಗಂಟು ಈ ಶಾಸನದಿಂದ ಬಿಡಿಸಿಕೊಂಡಿತು. ಈ ಶಾಸನವು ಸಂಸ್ಕೃತ, ಕನ್ನಡ ಹಾಗೂ ತೆಲುಗು ಭಾಷೆಯಲ್ಲಿದ್ದು, ಕನ್ನಡ ಲಿಪಿಯಲ್ಲಿ ಬರೆದಿದೆ. ಇದರಿಂದ ಈ ಶಾಸನದ ಕಾಲಕ್ಕೆ ಕನ್ನಡವು ರಾಜ ಮನ್ನಣೆ ಪಡೆದಿತ್ತು ಎಂದು ತಿಳಿಯಬಹುದು. ಈ ಶಾಸನದಿಂದ ಕನ್ನಡದ ಆದಿಕವಿ ಪಂಪನ ಬಗೆಗಿದ್ದ ಗೊಂದಲಗಳಿಗೆ ತೆರೆ ಬಿದ್ದಂತಾಗಿದೆ. ಕನ್ನಡದ ಆದಿಕವಿ ಪಂಪನ ಬಗೆಗಿನ ಗೊಂದಲಗಳಿಗೆ ತೆರೆ ಎಳೆದ ಈ ಶಾಸನವು ಕನ್ನಡ ಸಾಹಿತ್ಯ ಕ್ಷೇತ್ರದಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದೆ.

'ಆತಕೂರು ಶಾಸನ' ಇದೊಂದು ವಿಶಿಷ್ಟವಾದಂತಹ ವೀರಗಲ್ಲು. ಇದರ ಕಾಲ ಕ್ರಿ.ಶ. ೯೫೦. ಮನುಷ್ಯನಿಗೆ ಅಲ್ಲದೇ, ಅತ್ಯಂತ ಪ್ರೀತಿ ಪಾತ್ರವಾದ ಪ್ರಾಣಿಗಳಿಗೂ ಕೂಡ ಸ್ಮಾರಕಗಳನ್ನು ನೆಡುತ್ತಿದ್ದರು ಎಂಬ ವಿಷಯ ಈ ಶಾಸನದಿಂದ ದೃಢವಾಗುತ್ತದೆ. ಇದು ಮಂಡ್ಯ ಜಿಲ್ಲೆಯ ಆತಕೂರಿನ ಚಕ್ರೇಶ್ವರ ದೇವಾಲಯದ ಮುಂದೆ ಇದೆ. ಈಗ ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಾಹಲಯದಲ್ಲಿದೆ. ಸಾಕು ಪ್ರಾಣಿಯಾದ ನಾಯಿಯ ನೆನಪಿಗಾಗಿ ನೆಟ್ಟ ವೀರಗಲ್ಲು ಈ ಶಾಸನವಾಗಿದೆ. "ಶಾಸನದಲ್ಲಿ ನಾಯಿ-ಹಂದಿ ಹೋರಾಡುತ್ತಿರುವ ಚಿತ್ರವಿದೆ. ನಾಯಿಗಾಗಿ ವೀರ ಸ್ಮಾರಕವನ್ನು ಹಾಕಿರುವ ನಾಡಿನ ಅಪೂರ್ವ ವೀರಗಲ್ಲು ಇದಾಗಿದೆ"೮ ಎಂಬ ಅಭಿಪ್ರಾಯವನ್ನು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ನಮ್ಮ ನಡುವಿರುವ ಪ್ರಾಣಿ ಪಕ್ಷಿಗಳನ್ನು ಕೂಡ ಮಾನವೀಯತೆಯಿಂದ ಕಂಡ ಕನ್ನಡಿಗರ ಹೃದಯ ವೈಶಾಲೆಯ ದಾಖಲೆಯಂತೆ ಈ ಶಾಸನವಿದೆ.

'ಅತ್ತಿಮಬ್ಬೆಯ ಲಕ್ಕುಂಡಿ ಶಾಸನ'ವು ಗದಗ ಬಳಿಯ ಲಕ್ಕುಂಡಿ ಗ್ರಾಮದಲ್ಲಿ ದೊರೆತ್ತಿದೆ. ಈ ಶಾಸನ ಕ್ರಿ.ಶ. ೧೦೦೭ನೇ ಇಸವಿಗೆ ಸೇರಿದ್ದಾಗಿದೆ. ಇದು ಇರಿವಬೆಡಂಗ ಸತ್ಯಾಶ್ರಯನ ಕಾಲದ ರಚನೆಯಾಗಿದೆ. ಜೈನ ಬಸದಿಯ ಪಕ್ಕದಲ್ಲಿ ನಿಲ್ಲಿಸಿರುವ ಈ ಶಾಸನ ತನ್ನ ದಾನದ ಆ ಕಾರ್ಯಗಳಿಂದ ಹೆಸರನ್ನು ಪಡೆದ ಅತ್ತಿಮಬ್ಬೆ ಎಂಬ ಜೈನ ಮಹಿಳೆಯ ವಿಷಯಗಳನ್ನು ಒಳಗೊಂಡಿದೆ. ಅತ್ತಿಮಬ್ಬೆ ಎಂಬ ಹೆಸರು ಜೈನ ಮಹಿಳೆಯ ಹೆಸರಾದರೂ, ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯಲ್ಲಿ ಅತ್ಯಂತ ಮುಖ್ಯವಾದ ಹೆಸರಾಗುತ್ತದೆ. ದಾನ ಚಿಂತಾಮಣಿ ಅತ್ತಿಮಬ್ಬೆ ಹಲವಾರು ರೀತಿಯಲ್ಲಿ ಚಿತ್ರಣಗೊಂಡಿದ್ದು, ಪ್ರಾಚೀನ ಕರ್ನಾಟಕದ ಸ್ತ್ರೀಯರ ಪ್ರತಿನಿಧಿಯಾಗಿ ನಮ್ಮೊಡನೆ ಇದ್ದಾಳೆ. ಲಕ್ಕುಂಡಿಯ ಶಾಸನವು 'ಅತ್ತಿಮಬ್ಬೆಯ ದಾನದ ಮಹಿಮೆಯನ್ನು ವರ್ಣಿಸಿರುವ ವಿವರವಲ್ಲದೆ, ಜೈನ ತೀರ್ಥಂಕರರಲ್ಲಿ ಎರಡನೆಯವನಾದ ಅಜಿತ ತೀರ್ಥಂಕರರ ಜೀವನ ವಿವರವನ್ನು ಸಹಾ ಒಳಗೊಂಡಿರುತ್ತದೆ.'

'ಬೆಳತೂರಿನ ದೇಕಬ್ಬೆ ಶಾಸನ' ಹೆಗ್ಗಡದೇವನಕೋಟೆ ತಾಲ್ಲೂಕಿನ ಬೆಳತೂರು ಬಳಿಯಲ್ಲಿ ಈ ಶಾಸನವಿದೆ. ಇದರ ಕಾಲ ಕ್ರಿ.ಶ. ೧೦೫೩. ಕರ್ನಾಟಕದಲ್ಲಿ ಮಹಾಸತಿ ಪದ್ಧತಿ ಬಹಳ ಕಾಲದಿಂದಲೂ ಬೆಳೆದು ಬಂದಿದೆ. ಇದರ ಬಗೆಗೆ ಅರಿಯಲು ನೂರಾರು ಶಾಸನಗಳು, ಹಲವಾರು ವಿದೇಶಿಯರ ಬರಹಗಳು ಸಹಾಯ ಮಾಡುತ್ತವೆ. ಈ ಶಾಸನ ಅನುಗಮನದ ವಿಭಾಗಕ್ಕೆ ಸೇರಿದ್ದು. ಮಹಾಸತಿ ಶಾಸನಗಳನ್ನು ಎರಡು ಭಾಗ ಮಾಡಬಹುದು. ಗಂಡನ ಜೊತೆ ಸಾಯುವುದು ಸಹಗಮನ, ದೂರದಲ್ಲಿ ಗಂಡ ಸತ್ತ ವಿಷಯ ತಿಳಿದು ಪ್ರಾಣ ಕಳೆದುಕೊಳ್ಳುವುದು ಅನುಗಮನ. ಮೊದಲೇ ಹೇಳಿದಂತೆ, ಈ ಶಾಸನದಲ್ಲಿ ಕರ್ನಾಟಕದಲ್ಲಿದ್ದ ಇಚ್ಛಿತ ಮರಣವನ್ನು ತಿಳಿಸುತ್ತದೆ. ಇಲ್ಲಿಯ ದೇಕಬ್ಬೆ ಯಾರ ಕೈಯಿಂದಲೋ ಸತಿಯಾದವಳಲ್ಲ. ಸಂಪ್ರದಾಯಕ್ಕೆ ಬದ್ಧಳಾಗಿ, ಸ್ವಂತ ಇಚ್ಛೆಯಿಂದ ಸ್ವತಃ ಬೆಂಕಿಗೆ ಬೀಳುತ್ತಾಳೆ. ತಂದೆ-ತಾಯಿಯರು, ಸ್ನೇಹಿತೆಯರು ಬೇಡವೆಂದರೂ ಅವರ ಮಾತನ್ನು ಧಿಕ್ಕರಿಸಿ, ಬೆಂಕಿಗೆ ಬೀಳುವ ಚಿತ್ರ ಆ ಕಾಲದ ದಿಟ್ಟ ಹೆಣ್ಣೊಬ್ಬಳ ಚಿತ್ರವಾಗಿದೆ. ಇದೇ ರೀತಿಯ ಹಲವು ಮಾಸ್ತಿ ಕಲ್ಲುಗಳು ನಾಡಿನಾದ್ಯಂತ ದೊರೆತಿವೆ. ಮಾಸ್ತಿಕಲ್ಲುಗಳಲ್ಲಿಯೂ ಹಲವು ವೈವಿಧ್ಯತೆಯ ಲಕ್ಷಣಗಳು ಕಂಡುಬರುತ್ತವೆ. ಈ ಮಾಸ್ತಿ ಶಿಲ್ಪದಲ್ಲಿರುವ ಸತಿಯು ಬಹಳ ಸುಂದರವಾಗಿದೆ. ಸಣ್ಣದಾದ ನಡುವನ್ನು ಹೊಂದಿದ್ದು, ಎದೆ, ಕೊರಳ ತುಂಬಾ ಆಭರಣಗಳನ್ನು ಧರಿಸಿ, ಕೇದಗೆ ಗರಿಗಳಿಂದ ಅಲಂಕರಿಸಿದ ಕೇಶದ ಗಂಟನ್ನು ಹಾಕಿಕೊಂಡಿದ್ದಾಳೆ.' ಇಂತಹ ಅಲಂಕಾರಿಕ, ಸೌಂದರ್ಯಯುತ ಮಾಸ್ತಿಕಲ್ಲುಗಳು ಬಹಳಷ್ಟಿವೆ. ಹೀಗಾಗಿ ದೇಕಬ್ಬೆ ಶಾಸನವು ನಾಡಿನ ಇತಿಹಾಸ ಮತ್ತು ಸಂಸ್ಕೃತಿ ರಚನೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುವುದರಲ್ಲಿ ಸಂಶಯವಿಲ್ಲ.

'ನಾಗಾವಿ ಶಾಸನ'ದಲ್ಲಿ ಉಲ್ಲೇಖವಾದ ಈ ಸ್ಥಳ ಗುಲ್ಬರ್ಗ ಜಿಲ್ಲೆಯ ಚಿಕ್ಕ ಊರು. ಇಲ್ಲಿನ ಶಾಸನ ಕಲ್ಯಾಣಿ ಚಾಲುಕ್ಯರ ಒಂದನೇ ಸೋಮೇಶ್ವರನದ್ದಾಗಿದ್ದು, ಕಾಲ ಸುಮಾರು ಕ್ರಿ.ಶ ೧೦೫೮. ಒಂದನೇ ಸೋಮೇಶ್ವರನ ಕಾಲದಲ್ಲಿ 'ಕಲ್ಯಾಣವು ಮುಖ್ಯ ರಾಜಧಾನಿಯಾಗಿತ್ತು. ಘಟಿಕಾಸ್ಥಾನದ ವಿವರವನ್ನು ನೀಡುವ ಈ ಶಾಸನ ಪ್ರಮುಖವಾದ ಶಾಸನವಾಗಿದೆ. ಅಲ್ಲಿರುತ್ತಿದ್ದ ಅಪಾರ ವಿದ್ಯಾರ್ಥಿ ಸಮೂಹ ಮತ್ತು ಗ್ರಂಥಗಳಿಗೆ ನೀಡುತ್ತಿದ್ದ ಪ್ರಾಮುಖ್ಯತೆಯಿಂದ ಸರಸ್ವತಿ ಭಂಡಾರಿಗನ ಹುದ್ದೆ ಇತ್ತೆಂದು ತಿಳಿಯಬಹುದು. ಪ್ರಾಚೀನ ಕಾಲದ ವಿದ್ಯಾಭ್ಯಾಸದಲ್ಲಿ

ಗ್ರಂಥಗಳಿಗೆ ಎಂತಹ ಮನ್ನಣೆ ಇತ್ತೆಂದು ಈ ಶಾಸನದಿಂದ ತಿಳಿದುಬರುತ್ತದೆ. ಹೀಗೆ ಕೋಡಿಮಠ ಶಾಸನ, ನಾಗಾವಿ ಶಾಸನಗಳಿಂದ ಪ್ರಾಚೀನ ಕರ್ನಾಟಕದ ವಿದ್ಯಾಭ್ಯಾಸದ ಬಗ್ಗೆ ಹೆಚ್ಚು ಮಾಹಿತಿಯನ್ನು ಪಡೆಯಬಹುದು. "ಪ್ರಾಚೀನ ಕರ್ನಾಟಕದ ವಿದ್ಯಾಕೇಂದ್ರಗಳಾದ ಬಿಜಾಪುರ ಜಿಲ್ಲೆಯ ಸಾಲೋಟಗಿ ಮಠ (೧೦ನೇ ಶತಮಾನ), ಬಳ್ಳಿಗಾವೆಯ ಕೋಡಿಮಠ (೧೧ನೇ ಶತಮಾನ), ಗುಲಬರ್ಗಾ ಜಿಲ್ಲೆಯ ಹೂವಿನ ಬಾಗೇವಾಡಿಯ ನಾಗಾವಿ, ನೊಳಂಬರ ಕಾಲದ ಈಗಿನ ಆಂಧ್ರ ಪ್ರದೇಶಕ್ಕೆ ಸೇರಿರುವ 'ಹೇಂಜೇರು', ಧಾರವಾಡ ಜಿಲ್ಲೆಯ ಹೊದ್ದೂರು ಇತ್ಯಾದಿ ಸ್ಥಳಗಳು ವಿದ್ಯಾಕೇಂದ್ರಗಳಾಗಿದ್ದವು."೭ ಅವುಗಳಲ್ಲಿ ಕೋಡಿಮಠವು ಪ್ರಮುಖವಾದ ವಿದ್ಯಾಕೇಂದ್ರವಾಗಿದೆ. ಎಂ.ಚಿದಾನಂದಮೂರ್ತಿಯವರು ಬೆಳಗಾವಿಯ ಮಠಗಳು ಸಮಾಜದ ಕಾರ್ಯಗಳಿಗೆ ಇಂದು ಸ್ಪಂದಿಸುವಂತೆ ಹಿಂದೆಯೂ ಸ್ಪಂದಿಸುತ್ತಿದ್ದವೆಂದು ಈ ಶಾಸನದಿಂದ ತಿಳಿದುಬರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೇ, ಈ ಮಠ ರೋಗಿಗಳಿಗೂ ಅಭಯ ಸ್ಥಾನವಾಗಿತ್ತು ಎಂದು ತಿಳಿದುಬರುತ್ತದೆ. ಹೀಗಾಗಿ ಈ ಮಠವು ತಪಸ್ಸು, ಜ್ಞಾನ, ಕಲೆಯ ಜೊತೆಗೆ ಮಾನವೀಯತೆಯನ್ನು ಮೈಗೂಡಿಸಿಕೊಂಡಿತ್ತೆಂದು ಹೇಳಬಹುದು.

'ಅಬ್ಬಲೂರು ಶಾಸನ' ಧಾರವಾಡ ಜಿಲ್ಲೆಯ ಹೀರೆಕೆರೂರಿನ ತಾಲ್ಲೂಕಿನ 'ಅಬ್ಬಲೂರು' ಎಂಬ ಗ್ರಾಮದಲ್ಲಿದೆ. ಈ ಶಾಸನ ಕೇಂದ್ರವ್ಯಕ್ತಿ ಏಕಾಂತದ ರಾಮಯ್ಯ. ಈತ ಜೈನರ ಸವಾಲನ್ನು ಸ್ವೀಕರಿಸಿ, ಅದರಂತೆ ತನ್ನ ಶಿರವನ್ನೇ ಕತ್ತರಿಸಿ, ಮತ್ತೆ ಜೀವವನ್ನು ಪಡೆದ ಘಟನೆಯನ್ನು ತಿಳಿಸುತ್ತದೆ. ಜೈನರೊಡನೆ ವಾದಿಸಿ ಲೋಕಕ್ಕೆಲ್ಲ ಒಂದೇ ದೈವ ಅದು ಶಿವ ಎಂಬ ಅಂಶವನ್ನು ತಿಳಿಸುತ್ತಾನೆ. ಈ ಮೂಲಕ ಶೈವಪರಂಪರೆ ಈ ಮಣ್ಣಿನಲ್ಲಿ ಒಂದಾಗಿತ್ತೆಂಬ ಸತ್ಯಸಂಗತಿ ತಿಳಿಯುತ್ತದೆ. ಬೊಪ್ಪಣನ 'ಗೊಮ್ಮಟ ಸ್ತುತಿ' ಶಾಸನವು ಶ್ರವಣಬೆಳಗೊಳದಲ್ಲಿದೆ. ಇದರ ಕಾಲ ಕ್ರಿ.ಶ. ೧೨ನೇ ಶತಮಾನ. ಈ ಶಾಸನದ ಪ್ರಮುಖ ಲಕ್ಷಣವೆಂದರೆ ಇದು 'ಉಪಮ ರೂಪಕ ಅಲಂಕಾರ'ದಲ್ಲಿ ರಚನೆಗೊಂಡಿದೆ. ನಿದರ್ಶನಕ್ಕೆ ನೋಡುದಾದದರೆ, ಅಷ್ಟೊಂದು ದೊಡ್ಡ ರೂಪ ಎಂದರೆ, ಅವನು ಮನ್ಮಥ. ಅಷ್ಟೊಂದು ಶೂರ ಎಂದರೆ, ಚಕ್ರವರ್ತಿ ಗೆದ್ದವ. ಉದಾತ್ತನೆ ಎಂದರೆ, ಗೆದ್ದರೂ ಭೂಮಿಯನ್ನು ದಾನ ಕೊಟ್ಟವ. ಅತಿ ಅಭಿಮಾನಿಯೇ ಎಂದರೆ, ತಪಸ್ಸಿಗೆ ನಿಂತು ಸಹ ತಾನು ಕೊಟ್ಟ ಭೂಮಿಯಲ್ಲಿ ನನ್ನ ಪಾದ ಇದೆ ಎಂದುಕೊಂಡವನು. ಅನನ್ಯ ಜ್ಞಾನದವನೇ ಎಂದರೆ, ಕರ್ಮವನ್ನು ಕತ್ತರಿಸಿದವನು. ಈ ವಾಕ್ಯಗಳೆ ಕನ್ನಡ ಶಾಸನ ಕವಿಗಳ ಅಲಂಕಾರಕ್ಕೆ ನೀಡಿದ ಮಹತ್ವವನ್ನು ಸಾರುತ್ತವೆ. 'ಕುವರ ಲಕ್ಷ್ಮಣನ ವೀರಗಲ್ಲು' ಇದರ ಕಾಲ ಕ್ರಿ.ಶ. ೧೨೨೦. ಇದೊಂದು ವೀರಗಲ್ಲು. 'ಯಾವುದೇ ರೀತಿಯ ಹೋರಾಟದಲ್ಲಿ ಮಡಿದ ವೀರನ ನೆನಪಿಗಾಗಿ, ಕೃತಜ್ಞತೆಯ ಸಂಕೇತವಾಗಿ ಮಡಿದ ವ್ಯಕ್ತಿಯ ಆಶ್ರಯದಾತ, ಅವನಿಂದ ಉಪಕೃತರಾದವರು, ಅವನ ಬಂಧುಗಳು ನಿಲ್ಲಿಸುವ ಶಿಲೆಯನ್ನು ವೀರಗಲ್ಲು ಎಂದು ಕರೆಯುವರು.' ಇದರ ಕೇಂದ್ರವ್ಯಕ್ತಿ ಕುವರ ಲಕ್ಷ್ಮಣ. ಕರ್ನಾಟಕದಲ್ಲಿ ಹಿಂದೆ ಗರುಡರೆಂಬುದೊಂದು ವರ್ಗವಿತ್ತು. 'ಗರುಡ'ರೆಂದರೆ 'ಅರಸನಿಗೆ ಬೆಂಗಾವಲಾಗಿ ನಿಂತು ಅವನು ಸಾಯುವರೆಗೂ ಅವನನ್ನು ರಕ್ಷಿಸಿ, ಸತ್ತಾಗ ಅವನೊಂದಿಗೆ ತಾವೂ ಸಂತೋಷದಿಂದ ಪ್ರಾಣಬಿಡುವ ಮಲ್ಲರ ಒಂದು ಗುಂಪು'. ಕುವರ ಲಕ್ಷ್ಮಣನು ಇದೇ ಬಗೆಯ ಒಬ್ಬ ಗರುಡ. ಇಂತಹ ಗರುಡರು ಜಗತ್ತಿನಲ್ಲಿ ಹಿಂದೆಮುಂದೆ ಎಂದೂ ಆಗದ ಅದ್ಭುತವಾದ ಸಾಹಸ ಕಾರ್ಯವನ್ನೂ, ಗುಣಗಳನ್ನು ಮೈಗೂಡಿಸಿಕೊಂಡಿದ್ದರು. ನಾನಾ ಶಾಸ್ತ್ರಗಳನ್ನು ತಿಳಿದ ಗರುಡರಲ್ಲಿ ಕುವರ ಲಕ್ಷ್ಮಣ ಖ್ಯಾತನಾಗಿದ್ದನು. ಗರುಡ ಪದ್ಧತಿ ಕನ್ನಡ ನಾಡಿನಲ್ಲಿ ಅಸ್ತಿತ್ವವಿದ್ದ ಬಗ್ಗೆ ಈ ಶಾಸನವು ದಾಖಲೆ ನೀಡುತ್ತದೆ.

'ಬುಕ್ಕರಾಯನ ಶ್ರವಣಬೆಳಗೊಳ ಶಾಸನ'ವು ಶ್ರವಣಬೆಳಗೊಳದಲ್ಲಿ ದೊರಕಿದೆ. ಈ ಶಾಸನ ಪ್ರಾಚೀನ ಕರ್ನಾಟಕದ ಧಾರ್ಮಿಕ ಪರಿಸರವನ್ನು ಅರಿಯಲು ಬಹಳ ಸಹಾಯಕವಾಗಿದೆ. ಎರಡು ಪ್ರಬಲವಾದ ಮತಗಳ ನಡುವೆ ನಡೆದ ಘರ್ಷಣೆ ಪರಾಕಾಷ್ಠೆ ಮುಟ್ಟಿದ್ದನ್ನು ಈ ಶಾಸನ ತಿಳಿಸುತ್ತದೆ. ಈ ಶಾಸನದಲ್ಲಿ ಮತೀಯ ಸಂಘರ್ಷಕ್ಕಿಂತ ಬುಕ್ಕರಾಯನ ವಿವೇಚನೆ, ಎರಡು ಮತಗಳ ಜಗಳವನ್ನು ತಡೆದ ರೀತಿ, ಉದಾರ ಮನೋಭಾವ ಮತ್ತು ಸಮನ್ವಯ ಮನೋಭಾವನೆಯನ್ನು ಕಾಣಬಹುದು. ಪಂಪ ಮಹಾಕವಿ ಹೇಳುವಂತೆ, ಈ ಶಾಸನದ ಹಿನ್ನೆಲೆಯಲ್ಲಿ ಇತರ ಸಮುದಾಯಗಳೊಂದಿಗೆ ಸಾಮರಸ್ಯ, ಸಂಘರ್ಷ, ಅದಕ್ಕೆ ಕಾರಣ. ಪರಿಣಾಮ, ಹಿನ್ನೆಲೆ

ಅಂತಹವುಗಳಿಂದ ಸಮಾಜದಲ್ಲಿ ಉಂಟಾಗುತ್ತಿದ್ದ ಬಿಕ್ಕಟ್ಟುಗಳನ್ನು ಇನ್ನು ಮುಂತಾದ ವಿಷಯಗಳನ್ನು ಕುರಿತು ಸಂಶೋಧನೆ ನಡೆಸಬಹುದಾಗಿದೆ ಎಂಬ ಮಾತುಗಳು ಈ ನಿಟ್ಟಿನಲ್ಲಿ ಪೂರಕವಾಗಿವೆ. ಜೊತೆಗೆ ಈ ರೀತಿಯ ನಡೆಯಿಂದ ಸಮಾಜದಲ್ಲಿ ಶಾಂತಿ, ಸಾಮರಸ್ಯ ಕಾಪಾಡಬಹುದು. ಈ ಸಾಂಸ್ಕೃತಿಕ ಅನನ್ಯತೆಗೆ ಹಲವು ಶಾಸನಗಳು ನಿದರ್ಶನವಾಗಿವೆ. ಹೀಗೆ ಹಲವು ಶಾಸನಗಳು ಕನ್ನಡ ಭಾಷೆ, ಕನ್ನಡ ಜನಾಂಗ ಮತ್ತು ಕನ್ನಡ ಪ್ರದೇಶಗಳ ಬಗೆಗೆ ವೈವಿಧ್ಯಮಯವಾದ ಜಗತ್ತನ್ನು ನಿರ್ಮಿಸಿರುವುದನ್ನು ಅವಲೋಕಿಸಬಹುದಾಗಿದೆ.

**ಅಡಿ ಟಿಪ್ಪಣಿ :**

೧. ಶಾಸನ ಮತ್ತು ಗದ್ಯ : ಹು.ಕಾ. ಜಯದೇವ : ಪು : ಸಂ : ೦೩

೨. ಕರ್ನಾಟಕ ಸಂಸ್ಕೃತಿ ಸಮೀಕ್ಷೆ : ಡಾ. ಎಚ್.ತಿಪ್ಪೇರುದ್ರಸ್ವಾಮಿ : ಪು : ಸಂ : ೨೩೦

೩. ಕರ್ನಾಟಕ ಸಂಸ್ಕೃತಿ ಸಮೀಕ್ಷೆ : ಡಾ. ಎಚ್. ತಿಪ್ಪೇರುದ್ರಸ್ವಾಮಿ : ಪು : ಸಂ : ೮೬

೪. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂ. ೦೧ : (ಪ್ರ.ಸಂ). ಸಿ.ಬಿ. ಹೊನ್ನುಸಿದ್ಧಾರ್ಥ : ಪು : ಸಂ : ೬೫

೫. ಶಾಸನ ಮತ್ತು ಗದ್ಯ : ಹು.ಕಾ. ಜಯದೇವ : ಪು : ಸಂ : ೧೫

೬. ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ : ಡಾ. ಸಿ. ಬಿ. ಹೊನ್ನಯ್ಯ : ಪು : ಸಂ : ೪೯೧

೭. ಕರ್ನಾಟಕ ಸಂಸ್ಕೃತಿ ಸಮೀಕ್ಷೆ : ಡಾ. ಎಚ್. ತಿಪ್ಪೇರುದ್ರಸ್ವಾಮಿ : ಪು : ಸಂ : ೨೨೨, ೨೨೩